ದಿನಾಂಕಃ **30.07.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು : 1 ಮತ್ತು 2 ನೇ ಪ್ರತಿವಾದಿಗಳ ಪರ ವಕೀಲರಿಂದ :**

ನಾನು ಬಿಸಿನೆಸ್ ಮಾಡುತ್ತೇನೆ. 2 ಮತ್ತು 3 ನೇ ಪ್ರತಿವಾದಿಗಳು ನನಗೆ 2008 ರಿಂದ ಪರಿಚಯವಿರುತ್ತಾರೆ. ಸೈಟ್ ಖರೀದಿಗೆ ಸಂಬಂಧಿಸಿದಂತೆ ನಿಮ್ಮನ್ನು ಯಾರು ಭೇಟಿಯಾಗಿರುತ್ತಾರೆ ಎಂದರೆ ಸಾಕ್ಷಿಯು 2008 ರಲ್ಲಿ ಕಂಪನಿಯ Representative ಭೇಟಿಯಾಗಿರುತ್ತಾರೆ, ಅವರ ಹೆಸರು ನೆನಪಿಲ್ಲ ಎನ್ನುತ್ತಾರೆ. ನಿಪಿ-1 ದಾಖಲೆಯು ಮೈಸೂರಿನಲ್ಲಿ ಆಗಿರುತ್ತದೆ. ನಿಪಿ-1 ನ್ನು ತಯಾರು ಮಾಡುವ ಸಂದರ್ಭದಲ್ಲಿ 2 ನೇ ಪ್ರತಿವಾದಿ ಮತ್ತು ಇತರರು ಇದ್ದರು, ಬೇರೆಯವರ ಹೆಸರು ಗೊತ್ತಿಲ್ಲ. 3 ನೇ ಪ್ರತಿವಾದಿ ಇದ್ದರೋ, ಇಲ್ಲವೋ ಗೊತ್ತಿಲ್ಲ. ದಾಖಲೆ ಮಾಡಿಕೊಳ್ಳುವಾಗ ಕೆಲವು ದಾಖಲೆಗಳನ್ನು ನಾನು ಪರಿಶೀಲಿಸಿರುತ್ತೇನೆ. ಆ ಸಮಯದಲ್ಲಿ ಪ್ರತಿವಾದಿಗಳು ಸದರಿ ಲೇ-ಔಟ್ ಗೆ ಕೆಲವು ಅನುಮತಿಗಳು ಬರುವುದು ಬಾಕಿ ಇರುತ್ತದೆ ಎಂದು ತಿಳಿಸಿದ್ದರು. ಒಪ್ಪಂದಕ್ಕೂ ಮುಂಚೆ ವಕೀಲರ ಸಲಹೆ ಪಡೆದಿರುತ್ತೇನೆ. ಸದರಿ ವಕೀಲರ ಸಲಹೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ನನಗೆ ಸದರಿ ಆಸ್ತಿಯ ಸರ್ವೇ ನಂಬರ್ ಗಳು ಅಷ್ಟಾಗಿ ನೆನಪಿಲ್ಲ. ನಿಪಿ-1 ರಲ್ಲಿ ನಿಖರವಾಗಿ ಸೈಟ್ ನಂಬರ್ ನಮೂದು ಮಾಡಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಫೈನಲ್ ನೋಟೀಸಿನಲ್ಲಿ ಪ್ರತಿವಾದಿಯವರೇ ಸೈಟ್ ನಂಬರ್ ತಿಳಿಸಿರುತ್ತಾರೆ ಎನ್ನುತ್ತಾರೆ. ನಿಪಿ-1 ರಲ್ಲಿ ನಿಖರವಾದ ಸೈಟನ್ನು ಮಾರಾಟ ಮಾಡುತ್ತೇವೆಂದು ಒಪ್ಪಂದ ಆಗಿಲ್ಲ ಎಂದರೆ ಸರಿ. ನಿಪಿ-1 ರಲ್ಲಿ 3 ನೇ ಪ್ರತಿವಾದಿಯ ಸಹಿ ಇಲ್ಲ ಎಂದರೆ ಸರಿ. ನಿಪಿ-1 ರಲ್ಲಿರುವ 2 ನೇ ಪ್ರತಿವಾದಿಯ ಸಹಿಗೂ, ನಿಪಿ-2 ಹಾಗೂ 3

ರಲ್ಲಿರುವ 2 ನೇ ಪ್ರತಿವಾದಿಯ ಸಹಿಗೂ ವ್ಯತ್ಯಾಸವಿರುತ್ತದೆ ಎಂದರೆ ಸರಿಯಲ್ಲ. ನಿಪಿ-2 ಮತ್ತು

3 ರಲ್ಲಿರುವ ಸಹಿಗಳು 2 ನೇ ಪ್ರತಿವಾದಿಯದ್ದಾಗಿದ್ದು, ನಿಪಿ-1 ರಲ್ಲಿ 2 ನೇ ಪ್ರತಿವಾದಿಯ ಸಹಿ ಇರುವುದಿಲ್ಲ, ಅದು ಅವರ ಫೋರ್ಜರಿ ಸಹಿಯಾಗಿರುತ್ತದೆ ಎಂದರೆ ಸರಿಯಲ್ಲ, ಸಾಕ್ಷಿ ನನ್ನ ಮುಂದೆಯೇ ಸಹಿ ಮಾಡಿರುತ್ತಾರೆ ಎನ್ನುತ್ತಾರೆ.

**2.** ಸೈಟ್ ನಂಬರ್ 518 ಕ್ಕೆ ಒಪ್ಪಂದ ಪತ್ರ ಮಾಡಿಕೊಟ್ಟಿರುತ್ತಾರೆಯೇ ಎಂದರೆ ಇಲ್ಲ ಸಾಕ್ಷಿಯು ಮುಂದುವರೆದು ಫೈನಲ್ ನೋಟೀಸಿನಲ್ಲಿ ಇರುತ್ತದೆ ಎನ್ನುತ್ತಾರೆ. ಸೈಟ್ ನಂಬರ್ 518 ಯಾವ ಸರ್ವೆ ನಂಬರಿನಲ್ಲಿ ಬರುತ್ತದೆ ಎಂದು ಗೊತ್ತಿಲ್ಲ.

**3.** ಪ್ರತಿವಾದಿಯವರು ದಿನಾಂಕಃ 27.07.2010 ರಂದು ನನಗೆ ನೋಟೀಸ್ ಕಳುಹಿಸಿರುತ್ತಾರೆ ಎಂದರೆ ಸಾಕ್ಷಿ ನನಗೆ ಅದು ಬಂದಿಲ್ಲ ಎನ್ನುತ್ತಾರೆ. ಪ್ರತಿವಾದಿಯವರು ದಿನಾಂಕಃ 27.12.2010 ಮತ್ತು 29.12.2010 ರಂದು ನನಗೆ ಅಂಚೆ ಮೂಲಕ ನೋಟೀಸ್ ಕಳುಹಿಸಿರುತ್ತಾರೆ ಎಂದರೆ ಸಾಕ್ಷಿ ಅದು ನನಗೆ ತಲುಪಿಲ್ಲ ಎನ್ನುತ್ತಾರೆ. 2010 ರಿಂದ 2019 ರವರೆಗೆ ನಾವು ಪ್ರತಿವಾದಿಗಳನ್ನು ಸಂಪರ್ಕಿಸಿರುವುದಿಲ್ಲ ಎಂದರೆ ಸುಳ್ಳು, ಸಾಕ್ಷಿಯು ಮುಂದುವರೆದು ನಾವು ಅವರನ್ನು ಭೇಟಿಯಾದಾಗಲೆಲ್ಲಾ ಅವರು ಕೆಲವು ಅನುಮತಿಗಳು ಬಂದಿರುವುದಿಲ್ಲವೆಂದು ಪ್ರತಿಬಾರಿಯು ಕಾಲಾವಕಾಶ ಕೇಳಿರುತ್ತಾರೆ ಎನ್ನುತ್ತಾರೆ. 2010 ರಿಂದ 2019 ರವರೆಗೆ ಪ್ರತಿವಾದಿಗಳಿಗೆ ವಕೀಲರ ನೋಟೀಸ್ ನೀಡಿಲ್ಲ.

**4.** ನಿಪಿ-2 ಯಾವ ದಿನಾಂಕದಂದು ನಿಮಗೆ ತಲುಪಿರುತ್ತದೆ ಎಂದರೆ ಸಾಕ್ಷಿ 2019 ರಲ್ಲಿ ಬಂದಿರುತ್ತದೆ ಎನ್ನುತ್ತಾರೆ. ನಿಪಿ-2 2019 ರಲ್ಲಿ ತಲುಪಿರುತ್ತದೆ ಎನ್ನಲು ದಾಖಲೆ ಇರುತ್ತದೆಯೇ ಎಂದರೆ ಸಾಕ್ಷಿ ನಿಪಿ-2 ರ ಜೊತೆಯಲ್ಲಿರುವ ಆರ್.ಪಿ.ಎ.ಡಿ.ಕವರಿನಲ್ಲಿ ನಮೂದು ಇರುತ್ತದೆ ಎನ್ನುತ್ತಾರೆ. ಸದರಿ ಆರ್.ಪಿ.ಎ.ಡಿ.ಕವರನ್ನು **ನಿಪಿ-2(ಎ)** ಎಂದು ಗುರುತಿಸಲಾಯಿತು.

**5.** ನಿಪಿ-3 ರ ಪ್ರಕಾರ ದಿ:11.03.2020 ರಂದು ಆಸ್ತಿ ನೋಂದಣಿ ಮಾಡಿಸಲು ಬನ್ನಿ ಎಂದು ತಿಳಿಸಿರುತ್ತಾರೆ ಎಂದರೆ ಸರಿ. ದಿ: 11.03.2020 ರಂದು ನೀವು ನೋಂದಣಿ ಮಾಡಿಸಲು ಹೋಗಿರುತ್ತೀರಾ ಎಂದರೆ ಸಾಕ್ಷಿ ಆಗ ಕೋವಿಡ್-19 ಪ್ರಾರಂಭವಾಗಿತ್ತು, ಲಾಕ್‌ಡೌನ್ ಇತ್ತು ಹಾಗಾಗಿ ಹೋಗಿಲ್ಲ ಎನ್ನುತ್ತಾರೆ. ನಂತರದಲ್ಲಿ ಅವರೇ ಸೇಲ್‌ಡೀಡ್ ಡ್ರಾಫ್ಟ್ ಕಳುಹಿಸಿದ್ದರು, ನಾವು ಕೆ-2 ಚಲನ್ ಪಡೆದುಕೊಂಡು ತಯಾರಿದ್ದೆವು, ಅವರೇ ನೋಂದಣಿಗೆ ಬಂದಿರುವುದಿಲ್ಲ ಎನ್ನುತ್ತಾರೆ. ದಿ: 11.03.2020 ರಂದು ಕೆ-2 ಚಲನ್ ಪಡೆದುಕೊಂಡಿದ್ದಿರಾ ಎಂದರೆ ಸಾಕ್ಷಿ ಅವರು ಸೇಲ್‌ಡೀಡ್ ಡ್ರಾಫ್ಟ್ ಕಳುಹಿಸಿರಲಿಲ್ಲ ಹಾಗೂ ಕೋವಿಡ್-19 ಇತ್ತು ಆ ಕಾರಣದಿಂದ ಚಲನ್ ಪಡೆದುಕೊಂಡಿಲ್ಲ ಎನ್ನುತ್ತಾರೆ. ಪ್ರತಿವಾದಿ ಕಛೇರಿಯಲ್ಲಿರುವ ಸಿಬ್ಬಂದಿಯು ದಿ: 07.10.2020 ರಂದು ಕೆ-2 ಚಲನ್ ಪಡೆದುಕೊಳ್ಳಿ ಎಂದು ನನಗೆ ದೂರವಾಣಿ ಕರೆ ಮಾಡಿ ತಿಳಿಸಿದ್ದರು. ಅವರು ದೂರವಾಣಿ ಕರೆ ಮಾಡಿದ್ದ ಬಗ್ಗೆ ದಾಖಲೆ ಹಾಜರುಪಡಿಸುತ್ತೀರಾ ಎಂದರೆ ನನ್ನ ಬಳಿ ಇಲ್ಲ ಎನ್ನುತ್ತಾರೆ. ಸದರಿ ದೂರವಾಣಿ ಸಂಖ್ಯೆ ಹೇಳಬಹುದೇ ಎಂದರೆ ನನ್ನ ಬಳಿ ಇಲ್ಲ ಎನ್ನುತ್ತಾರೆ. ಸದರಿ ದೂರವಾಣಿ ಸಂಭಾಷಣೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೀರಾ ಎಂದರೆ ನನ್ನ ಬಳಿ ಇಲ್ಲ ಎನ್ನುತ್ತಾರೆ. ನಾನು ಹೇಳಿದಂತೆ ಸಿಬ್ಬಂದಿಯು ದಿ: 07.10.2020 ರಂದು ನೋಂದಣಿಗೆ ಬನ್ನಿ ಎಂದು ತಿಳಿಸಿಲ್ಲ ಎಂದರೆ ಸರಿಯಲ್ಲ.

**6.** ನಾನು ಪ್ರತಿವಾದಿಗಳಿಗೆ ಕ್ರಯದ ಹಣ ಕೊಡಲು ಬಾಕಿಯಿದ್ದು ಹಾಗೂ Maintenance charges ಕೊಡಲು ಬಾಕಿಯಿದ್ದು ನಾನು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ

ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**